# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 22775/2017

| | |
|---|---|
| ಸಾಕ್ಷಿದಾರರ ಹೆಸರು : | ಶ್ರೀನಿವಾಸ ಎಸ್. |
| ತಂದೆಯ ಹೆಸರು : | ಸಿದ್ದೇಗೌಡ |
| ವಯಸ್ಸು : | 46 ವರ್ಷ |
| ಉದ್ಯೋಗ : | ಪೊಲೀಸ್ ಮುಖ್ಯ ಪೇದೆ, ತಿಲಕ್ ನಗರ ಪಿ.ಎಸ್. |
| ವಾಸ : | ತಲಘಟಪುರ, ಬೆಂಗಳೂರು. |

**ದಿನಾಂಕ 20-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**
**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ಜುಲೈ-2022 ರಿಂದ ಇಲ್ಲಿಯವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದ 1, 2, 4, 5 ಮತ್ತು 6 ನೇ ಆರೋಪಿತರ ವಿರುದ್ಧ ಉದ್ಘೋಷಣೆ ಮಾಡುವಂತೆ ನ್ಯಾಯಾಲಯದಿಂದ ಆದೇಶ ಬಂದಿದ್ದು. ಠಾಣಾಧಿಕಾರಿಯವರು ಉದ್ಘೋಷಣೆ ಮಾಡುವಂತೆ ನನಗೆ ನಿಯೋಜಿಸಿರುತ್ತಾರೆ.

2. ಅದರಂತೆ ದಿನಾಂಕ 20/09/2023 ರಂದು 2ನೇ ಆರೋಪಿಯ ವಿಳಾಸ: ಪೈಜರ್ ರವರ ಮನೆ, 1ನೇ ಮುಖ್ಯ ರಸ್ತೆ, 1 ನೇ ಅಡ್ಡರಸ್ತೆ, ಗುರಪ್ಪನಪಾಳ್ಯ, ಬೆಂಗಳೂರು ಇಲ್ಲಿಗೆ ಹೋಗಿ 2ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ಸಯ್ಯದ್ ಸಲೀಮ್ ಮತ್ತು ವಿಜಿ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ 2ನೇ ಆರೋಪಿಯ ವಿರುದ್ಧ ಉದ್ಘೋಷಣೆಯನ್ನು ಘೋಷಿಸಿ ಸದರಿ 2ನೇ ಆರೋಪಿ ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್

ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಮಸೀದಿಯ ಗೋಡೆಗೆ, ಬಸ್ ನಿಲ್ದಾಣದ ಗೋಡೆಗೆ ಮತ್ತು ವಿದ್ಯುತ್ ಕಂಬಕ್ಕೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಆದೇಶ ಮತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಆದೇಶವನ್ನು ನಿಪಿ-6 ಎಂದು, ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.**

3. ಅದೇ ದಿನ 5ನೇ ಆರೋಪಿಯ ವಿಳಾಸ: ಸಂಖ್ಯೆ.198, ದೇವರಾಜು ಅರಸು ಕಾಲೋನಿ, ಬೆಂಗಳೂರು ಇಲ್ಲಿಗೆ ಹೋಗಿ 5ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ರವಿಕುಮಾರ ಮತ್ತು ರಮೇಶ್ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ 5ನೇ ಆರೋಪಿಯ ವಿರುದ್ಧ ಉದ್ಘೋಷಣೆಯನ್ನು ಘೋಷಿಸಿ ಸದರಿ 5ನೇ ಆರೋಪಿ ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಅರುಸು ಕಾಲೋನಿಯ ಕಾರ್ಟರ್ಸ್ ನ ಗೋಡೆಗೆ, ವಿದ್ಯುತ್ ಕಂಬಕ್ಕೆ ಮತ್ತು ಶುದ್ಧ ಕುರಿಯುವ ನೀರಿನ ಘಟಕದ ಗೋಡೆಗೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಬೆಳಿಗ್ಗೆ 11.30 ಗಂಟೆಯಿಂದ ಮದ್ಯಾಹ್ನ 12.30 ಗಂಟೆಯವರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ

ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-8 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.**

4. ಅದೇ ದಿನ 4ನೇ ಆರೋಪಿಯ ವಿಳಾಸ: ನಂ.36/1, 13 ನೇ ಕ್ರಾಸ್, ಹೊಸಳ್ಳಿ ಮುಖ್ಯ ರಸ್ತೆ, ಪಾದರಾಯನಪುರ, ಬೆಂಗಳೂರು ಇಲ್ಲಿಗೆ ಹೋಗಿ 4ನೇ ಆರೋಪಿಯ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ಪಿರುಮಾಳ್ ಮತ್ತು ಕಿರಣ್ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ 4ನೇ ಆರೋಪಿಯ ವಿರುದ್ದ ಉದ್ಘೋಷಣೆಯನ್ನು ಘೋಷಿಸಿ ಸದರಿ 4ನೇ ಆರೋಪಿ ಕಂಡು ಬಂದಲ್ಲಿ ಹಾಗೂ ಆತನ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ಬಸ್ ನಿಲ್ದಾಣದ ಗೋಡೆಗೆ ಮತ್ತು ವಿದ್ಯುತ್ ಕಂಬಕ್ಕೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಮದ್ಯಾಹ್ನ 02.00 ಗಂಟೆಯಿಂದ 03.00 ಗಂಟೆಯವೆರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ **ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-9 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.**

5. ಅದೇ ದಿನ 1 ಮತ್ತು 6 ನೇ ಆರೋಪಿತರ ವಿಳಾಸ: ನಂ.22, 7ನೇ ಕ್ರಾಸ್, ಹೌಸಿಂಗ್ ಬೋರ್ಡ್, ಮಾಗಡಿ ರೋಡ, ಬೆಂಗಳೂರು ಇಲ್ಲಿಗೆ ಹೋಗಿ 1 ಮತ್ತು 6 ನೇ ಆರೋಪಿತರ ಬಗ್ಗೆ ವಿಚಾರಿಸಿದಾಗ ಯಾವುದೇ ಮಾಹಿತಿ ದೊರೆಯಿಲಿಲ್ಲ. ಪಂಚರಾದ ಗೋಪಾಲ ಮತ್ತು ಚಿನ್ನಪ್ಪ ಎಂಬುವವರನ್ನು ಕರೆಯಿಸಿ ಅವರ ಸಮಕ್ಷಮ ಸ್ಥಳದಲ್ಲಿ ಸದರಿ

1 ಮತ್ತು 6 ನೇ ಆರೋಪಿತರ ವಿರುದ್ದ ಉದ್ಘೋಷಣೆಯನ್ನು ಘೋಷಿಸಿ ಸದರಿ 1 ಮತ್ತು 6 ನೇ ಆರೋಪಿತರು ಕಂಡು ಬಂದಲ್ಲಿ ಹಾಗೂ ಅವರ ಬಗ್ಗೆ ಮಾಹಿತಿ ತಿಳಿದಲ್ಲಿ ಕೂಡಲೇ ನ್ಯಾಯಾಲಯಕ್ಕಾಗಲೀ ಅಥವಾ ತಿಲಕ್ ನಗರ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ಸಾರ್ವಜನಿಕವಾಗಿ ಧ್ವನಿವರ್ಧಕದ ಮುಖಾಂತರ ಕೂಗಿ ಹೇಳಿ ಘೋಷಿಸಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ವಿದ್ಯುತ್ ಕಂಬಕ್ಕೆ ಮತ್ತು ಬಸ್ ನಿಲ್ದಾಣದ ಗೋಡೆಗೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ. ಸ್ಥಳದಲ್ಲಿ ಸಂಜೆ 04.30 ಗಂಟೆಯಿಂದ 05.30 ಗಂಟೆಯವರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ತಯಾರಿಸಿ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಉದ್ಘೋಷಣೆಯ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. **ಆದ್ದರಿಂದ ಉದ್ಘೋಷಣೆಯ ಪಂಚನಾಮೆಯನ್ನು ನಿಪಿ-10 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.